# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 381 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 15-09-2022 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕಿನ ಹೆಣ್ಣೂರು ಗ್ರಾಮದ ಕಸಬಾ ಹೋಬಳಿಯ ಹೆಚ್ ಬಿ ಆರ್ 5ನೇ ಬ್ಲಾಕ್ ಸರ್ವೆ ನಂ. 100/10 ಮತ್ತು 100/11 ರಲ್ಲಿನ ಅನಧಿಕೃತ ಕಟ್ಟಡವನ್ನು ನೆಲಸಮಗೊಳಿಸಲು ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: WP 8753 of 2020 (LB-BMP-PIL) ದಿನಾಂಕ: 21/09/2021ರ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; | ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕಿನ ಹೆಣ್ಣೂರು ಗ್ರಾಮದ ಕಸಬಾ ಹೋಬಳಿಯ ಹೆಚ್ ಬಿ ಆರ್ 5ನೇ ಬ್ಲಾಕ್ ಸರ್ವೆ ನಂ. 100/10 ಮತ್ತು 100/11 ರಲ್ಲಿನ ಅನಧಿಕೃತ ಕಟ್ಟಡವನ್ನು ನೆಲಸಮಗೊಳಿಸುವ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 8753/2020ರ ಮೇಲೆ ಮಾನ್ಯ ನ್ಯಾಯಾಲಯವು ದಿನಾಂಕ: 21-09-2021 ರಂದು ನೀಡಿರುವ ಆದೇಶದಂತೆ ಪ್ರಶ್ನಿತ ನಿವೇಶನಕ್ಕೆ ಸಂಬಂಧಿಸಿದ ಕಟ್ಟಡದ ವ್ಯತಿರಿಕ್ತ ಭಾಗಗಳನ್ನು ಸ್ವತ್ತಿನ ಮಾಲೀಕರ ವತಿಯಿಂದ ತೆರವುಗೊಳಿಸಲಾಗಿರುತ್ತದೆ. |
| ಆ) | ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಯಾವ ದಿನಾಂಕದಂದು ಜಾರಿಗೊಳಿಸಲಾಗಿದೆ; ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಅಧಿಕಾರಿಗಳ ಹೆಸರಿನೊಂದಿಗೆ ಮಾಹಿತಿ ನೀಡುವುದು; | ಮಾನ್ಯ ಉಚ್ಚ ನಾಯ್ಯಾಲಯದ ಆದೇಶವನ್ನು ದಿನಾಂಕ: 20-10-2021 ರಂದು ಜಾರಿಗೊಳಿಸಲಾಗಿರುತ್ತದೆ. ಸದರಿ ದಿನಾಂಕಗಳಂದು ಕೆಳಕಂಡ ಅಧಿಕಾರಿಗಳು ಕಾರ್ಯನಿರ್ವಹಿಸಿರುತ್ತಾರೆ.<br>1) ಶ್ರೀ.ಇಮ್ರಾನ್.ಪಿ.ಎ. ಸಹಾಯಕ ಕಾರ್ಯಪಾಲಕ ಅಭಿಯಂತರು, ಬಿ.ಬಿ.ಎಂ.ಪಿ.<br>2) ಶ್ರೀಮತಿ.ಸಾವಿತ್ರಿ. ಸಹಾಯಕ ಅಭಿಯಂತರು, ಬಿ.ಬಿ.ಎಂ.ಪಿ. |
| ಇ) | ನ್ಯಾಯಾಲಯದ ಆದೇಶವನ್ನು ಪಾಲಿಸದೇ ನ್ಯಾಯಾಲಯ ನಿಂದನೆ ಪ್ರಕರಣ ದಾಖಲಾಗಲು ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ನ್ಯಾಯಾಲಯದ ನಿಂದನೆ ಪ್ರಕರಣ ಸಂಖ್ಯೆ: ಸಿ.ಸಿ.ಸಿ ನಂ. 167/2022 ದಿನಾಂಕ: 07-09-2020 ರಲ್ಲಿ ಪ್ರಕರಣವು ಇತ್ಯರ್ಥಗೊಂಡಿರುವುದರಿಂದ ಸದರಿ ಪ್ರಶ್ನೆಯು ಉದ್ಭವಿಸುವುದಿಲ್ಲ. |
| ಈ) | ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕಿನ ಹೆಣ್ಣೂರು ಗ್ರಾಮದ ಕಸಬಾ ಹೋಬಳಿಯ ಹೆಚ್ ಬಿ ಆರ್ 5ನೇ ಬ್ಲಾಕ್ ಸರ್ವೆ ನಂ. 100/10 ಮತ್ತು 100/11 ರಲ್ಲಿ ಯಾವ ಕಟ್ಟಡವನ್ನು ನಿರ್ಮಿಸಲು ಅನುಮತಿಯನ್ನು ನೀಡಲಾಗಿದೆ; (ಅನುಮತಿ ನೀಡಿದ ಅಧಿಕಾರಿಯ ಹೆಸರು ಮತ್ತು ಹುದ್ದೆಯೊಂದಿಗೆ ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲೆ ಉತ್ತರ ತಾಲ್ಲೂಕು, ಹೆಣ್ಣೂರು ಗ್ರಾಮ ಕಸಬಾ ಹೋಬಳಿ ಹೆಚ್‌ಬಿಆರ್ 5ನೇ ಬ್ಲಾಕ್ ಸರ್ವೆ ನಂ. 100/10 ಮತ್ತು 100/11 ರಲ್ಲಿನ ಸ್ವತ್ತಿಗೆ ಸಹಾಯಕ ನಿರ್ದೇಶಕರು ನಗರ ಯೋಜನೆ (ಪೂರ್ವ) ರವರ ಕಛೇರಿಯಿಂದ ದಿನಾಂಕ: 19-01-2022 ರಂದು ವಸತಿ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ.<br>ಅನುಮತಿ ನೀಡಿದ ಅಧಿಕಾರಿಯ ಹೆಸರು ಮತ್ತು ಹುದ್ದೆಯ ವಿವರ ಈ ಕೆಳಕಂಡಂತಿದೆ.<br><table><tr><th>ಅಧಿಕಾರಿ ಹೆಸರು</th><th>ಹುದ್ದೆ</th></tr><tr><td>ಶ್ರೀ. ಲಕ್ಷ್ಮಣ</td><td>ಸಹಾಯಕ ನಿರ್ದೇಶಕರು ನಗರ ಯೋಜನೆ (ಪೂರ್ವ)</td></tr></table> |

| | | |
|---|---|---|
| ಉ) | ಈ ಕಟ್ಟಡ ನಿರ್ಮಾಣಕ್ಕಾಗಿ ಸ್ಥಳ ಪರಿಶೀಲನೆಯನ್ನು ಯಾವ ದಿನಾಂಕದಂದು ಕೈಗೊಳ್ಳಲಾಯಿತು; ಸದರಿ ದಿನಾಂಕದಂದು ಆ ಸ್ಥಳದಲ್ಲಿ ಯಾವುದಾದರೂ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿತ್ತೇ; ಈ ಕುರಿತು ಸರ್ಕಾರದ ನಿಲುವೇನು; ಇಲ್ಲಿ ಕಟ್ಟಡ ನಿರ್ಮಿಸಲು ಸಾರ್ವಜನಿಕರು ಸಲ್ಲಿಸಿರುವ ಆಕ್ಷೇಪಣೆ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕಟ್ಟಡ ನಿರ್ಮಾಣಕ್ಕಾಗಿ ಸಹಾಯಕ ನಿರ್ದೇಶಕರು ನಗರ ಯೋಜನೆ (ಪೂರ್ವ) ಕಛೇರಿಯಿಂದ ದಿನಾಂಕ: 26-10-2021 ರಂದು ಸ್ಥಳ ಪರಿಶೀಲನೆಯನ್ನು ಕೈಗೊಳ್ಳಲಾಗಿರುತ್ತದೆ. ಆ ಸಮಯದಲ್ಲಿ ನಿರ್ಮಾಣ ಕಾಮಕಾರಿ ಕೈಗೊಳ್ಳಲಾಗಿತ್ತು. ಈ ಹಿನ್ನಲೆಯಲ್ಲಿ, ಈ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ಪ್ರಕರಣ ಡಬ್ಲ್ಯೂಪಿ ನಂ. 8753/2020ರ ಮೇಲೆ ಮಾನ್ಯ ನ್ಯಾಯಾಲಯವು ದಿನಾಂಕ: 21-09-2021 ರಲ್ಲಿ ನೀಡಿರುವ ಆದೇಶದಂತೆ ಹಾಗೂ ನ್ಯಾಯಾಲಯದ ನಿಂದನಾ ಪ್ರಕರಣ ಸಂಖ್ಯೆ: ಸಿ.ಸಿ.ಸಿ ನಂ.167/2022ರ ಮೇಲೆ ದಿನಾಂಕ: 07-09-2020 ರಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಲಾಗಿದೆ. |

**ನಅಇ 414 ಎಂಎನ್‌ಯು 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ